ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿಬ್ಬ:

ವಿಷಯ: ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಯಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಮಾನ್ಯ ಮುಖ್ಯ ಆಯುಕ್ತರು ಬಿಬಿಎಂಪಿರವರ ಕಛೇರಿ ಆದೇಶ ಸಂಖ್ಯೆ:ಮು.ಆ/ಪಿಆರ್/93/2021-22, ದಿನಾಂಕ:06-07-2021
2. ಮಾನ್ಯ ಆಡಳಿತಗಾರರು ಬಿಬಿಎಂಪಿ ರವರ ಕ್ರಿಯಾ ಯೋಜನೆಯ ಅನುಮೋದನೆಯ ನಡವಳಿಗೆ ಸಂಖ್ಯೆ:
3. ಟೆಂಡರ್ ಪ್ರಕಟಣೆ ಸಂಖ್ಯೆ: EE/BTP/BBMP/E-PMT/16/2022-23, Date: 12-10-2022.

* * * * *

(1) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 2022-23ನೇ ಸಾಲಿನ ಪಾಲಿಕೆಯ ಆಯವ್ಯದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಮಂಜೂರಾಗಿದ್ದು, ಅದರಂತೆ ಯಲಹಂಕ ವಲಯದ ವ್ಯಾಪ್ತಿಯಲ್ಲಿ ಬರುವ ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ 110 ಹಳ್ಳಿಗಳ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾಗಿರುವ ಅನುದಾನದಲ್ಲಿ ವಾರ್ಡ್ ನಂ-06, 07 ಮತ್ತು 08ಕ್ಕೆ ಮಂಜೂರಾಗಿರುವ ಕಾಮಗಾರಿಗಳಿಗೆ ಉಲ್ಲೇಖ 3ರಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದ್ದು. ಮಾನ್ಯ ಆಯುಕ್ತರು ಬಿಬಿಎಂಪಿರವರು ಉಲ್ಲೇಖ 1ರ ಆದೇಶದಲ್ಲಿ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡುವ ವ್ಯವಸ್ಥೆಯನ್ನು ಬಿಬಿಎಂಪಿ ಅನುದಾನಗಳಿಗೆ ಆಯಾ ವಲಯ ಮುಖ್ಯ ಅಭಿಯಂತರರ ಕಛೇರಿಯಲ್ಲಿ ಅನುಮೋದಿತ ಕ್ರಿಯಾ ಯೋಜನೆಯಂತೆ ಕಾಮಗಾರಿಗಳಿಗೆ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ನಿರ್ವಹಣೆ ಪೂರ್ಣ ಛಾಯಾಚಿತ್ರಗಳೊಂದಿಗೆ ಅನ್ವಯವಾಗುವ ನಿರ್ವಹಣೆ ಕಾಮಗಾರಿಗಳಿಗೆ ರಸ್ತೆ ಇತಿಹಾಸ, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಪ್ರಕ್ರಿಯೆಗಳನ್ನು ಪೂರೈಸಿ ಟೆಂಡರ್ ಅಂತಿಮಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಸಂಖ್ಯೆ ಪಡೆಯಲು ಸೂಚಿಸಲಾಗಿರುತ್ತದೆ.

(2) ಬ್ಯಾಟರಾಯನಪುರ ವಿಭಾಗದಲ್ಲಿ ದಿನಾಂಕ:12-10-2022ರಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಪೂರ್ಣಗೊಳಿಸಲಾಗಿದ್ದು, ಆದರೆ ಗುತ್ತಿಗೆದಾರರಿಗೆ ಆನ್‌ಲೈನ್ ಕಾರ್ಯಾದೇಶ ನೀಡಲು ಜಾಬ್ ಕೋಡ್ ದೊರೆತ್ತಿಲ್ಲದಿದ್ದರಿಂದ ಈ ಕೆಳಕಂಡ ಕಾಮಗಾರಿಗಳು ಸಾರ್ವಜನಿಕರಿಗೆ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಯಾಗಿದ್ದು, ಅತ್ಯಾವಶ್ಯಕ ಕಾಮಗಾರಿಗಳಾಗಿರುತ್ತವೆ.

(3) ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕವಾಗಿ ಅರ್ಹರಾದ ಬಿಡ್‌ದಾರರಲ್ಲಿ ಆರ್ಥಿಕವಾಗಿ ಎಲ್-1 ಬಿಡ್‌ದಾರರಿಂದ ದಿನಾಂಕ:02-11-2022ರಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮತಿ ನೀಡಲು ಕೋರಿ ತಮ್ಮ ಮುಂದಿನ ಆದೇಶಕ್ಕಾಗಿ ಕಡತವನ್ನು ಸಲ್ಲಿಸಿದೆ.

Sl no	Name of work	Est cost	L-1 Bidders Name
1	Maintenance of water supply Existing Borewells at Chokkanahalli, Thirumenahalli surrounding area in ward no-6 (Kogilu) Byatarayanapura sub division.	25.00	S.Narayana Rao
2	Maintenance of water supply Existing Borewells at Kattigenahalli, Bellahalli surrounding area in ward no-6 (Kogilu) Byatarayanapura sub division.	25.00	

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

3	Maintenance of water supply Existing Borewells at Thinisandra and Saraipaly surrounding area in ward no-7 (Thanisandra) Byatarayanapura sub division.	25.00	S.Narayana Rao
4	Maintenance of water supply Existing Borewells at Hegdenagara surrounding area in ward no-7 (Thanisandra) Byatarayanapura sub division.	25.00	
5	Maintenance of water supply Existing Borewells at Rachenahalli surrounding area in ward no-8 (Jakkur) Byatarayanapura sub division.	25.00	

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು-560092.

(W)

ಮುಖ್ಯ ಅಭಿಯಂತರರು (ಯ.ವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ